**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 33/2018** ಸಿ.ಡಬ್ಲ್ಯೂ -25

ಪಿ.ಡಬ್ಲ್ಯೂ -17

ಹೆಸರು : ಶಿವಶರಣಪ್ಪ

ತಂದೆ:ಗಂಡ : ಸೈದಪ್ಪ

ವಯಸ್ಸು : 66 ವರ್ಷ

ಉದ್ಯೋಗ : ನಿವೃತ್ತ ಎ.ಎಸ.ಐ

ವಾಸಸ್ಥಳ : ಅಫಜಲಪೂರ ದಿನಾಂಕ:31.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು 2016 ರಿಂದ 2017 ವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿದ್ದೇನೆ

ನನಗೆ ರಸ್ತೆ ಅಪಘಾತದ ಬಗ್ಗೆ ಕರೆ ಮುಖಾಂತರ ತಿಳಿದು ಬಂದಿದ್ದು, ಕಡಗಂಚಿಯ ಎನಡಿಪಿ ಪೆಟ್ರೊಲ ಬಂಕ ಬಳಿ ಕೋಡಿಯಾಳ ಬ್ರಿಡ್ಜ ಹತ್ತಿರ ಅಪಘಾತ ಅಗಿದೆ ಎಂದು ಗೊತ್ತಾಗಿದ್ದು, ನಾವು ಸ್ಥಳಕ್ಕೆ ಭೇಟಿ ನೀಡಿ ನೋಡಲಾಗಿ ಎರಡೂ ವಾಹನಗಳು ಅಲ್ಲಿಯೇ ಬಿದ್ದಿದ್ದವು ಹಾಗೂ ಶ್ರೀಶೈಲ ಎಂಬುವವನು ಸ್ಥಳದಲ್ಲಿಯೇ ಮೃತಪಟ್ಟಿದ್ದನು, ಶಿವಾನಂದರವರಿಗೆ ಗಾಯಗಳು ಆಗಿದ್ದವು. ಅಂಬುಲೆನ್ಸನ್ನುಕರೆಯಿಸಿ ಅಂಬುಲೆನ್ಸನಲ್ಲಿ ಕಲಬುರಗಿಗೆ ಕಳುಹಿಸಿರುತ್ತೇನೆ. ಶ್ರೀಶೈಲರವರ ಮೃತದೇಹವನ್ನು ಶವಪರಿಕ್ಷೆಗಾಗಿ ಶವಾಗಾರಕ್ಕೆ ಕಳುಹಿಸಿರುತ್ತೇವೆ. ಚಾಸಾ-8, 10, 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ-1 ರವರ ಪುರವಣಿ ಹೇಳಿಕೆ ಪಡದಿರುತ್ತೇನೆ. 11.30 ರಿಂದ 3.00 ಗಂಟೆಯವರೆಗೆ ಶವ ಪಂಚನಾಮೆಯನ್ನು ಮಾಡಿರುತ್ತೇನೆ. ಗುನ್ನೆ ಸ್ಥಳ ಪಂಚನಾಮೆಯನ್ನು 4.30 ರಿಂದ 5.30 ರ ವರೆಗೆ ಚಾಸಾ-6, 7 ರವರ ಸಮಕ್ಷಮ ಮಾಡಿರುತ್ತೇನೆ.

ಸಾಕ್ಷಿಗೆ ಈಗ ನಿಪಿ-9 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿದ್ದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಕೇಸ ಡೈರಿ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಕೇಸ ಡೈರಿಯನ್ನು ನಿಪಿ-20, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಶ್ರೀಶೈಲರವರ ಶವಪರಿಕ್ಷೆಗೆ ಕಳುಹಿಸಿದ ವರದಿ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ವರದಿಯನ್ನು ನಿಪಿ-21, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ-11 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-11(ಸಿ) ಎಂದು ಗುರುಸಲಾಯಿತು.

**ಪಾ. ಸವಾಲು:- ಆರೋಪಿತರ ಪರ ಶ್ರೀ ಎಸ.ಎಸ್.ಸಿ. ವಕೀಲರಿಂದ:**

ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಕಾರ ಪೆಟ್ರೊಲ ಬಂಕ ಕಡೆಗೆ ಪಲ್ಟಿಯಾಗಿತ್ತು ಎಂದರೆ ಸರಿ. ಅಳಂದ ಕಲಬುರಗಿ ಹೋಗುವ ರಸ್ತೆಯ ಎಡಭಾಗಕ್ಕೆ ಪಲ್ಟಿಯಾಗಿರುತ್ತದೆ ಎಂದರೆ ಸರಿ. ಪೂಲ ಸಣ್ಣದಿರುವ ಕಾರಣ ಸಾಮಾನ್ಯವಾಗಿ ಎರಡು ಕಡೆಯಿಂದ ಬರುವ ವಾಹನಗಳು ನಿಧಾನವಾಗಿ ಬರುತ್ತವೆ ಎಂದರೆ ಸರಿ. ಪೆಟ್ರೋಲ ಬಂಕನಿಂದ 50 ಅಡಿ ಅಂತರದಲ್ಲ ಕೋಡಿಯಾಳ ಬ್ರಿಡ್ಜ ಇರುತ್ತದೆ. ಪೆಟ್ರೋಲ ಬಂಕ ಹಾಗೂ ಬ್ರಿಡ್ಜ ಇರುವ ಕಾರಣ ಆಳಂದ ಕಡೆಯಿಂದ ಹೋಗುವ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಪಂಚನಾಮೆ ಸಮಯದಲ್ಲಿ ಗುನ್ನೆ ಸ್ಥಳದ

ಭಾವಚಿತ್ರಗಳನ್ನು ತೆಗೆದಿರುತ್ತೇವೆ. ಭಾವಚಿತ್ರಗಳನ್ನು ಪಂಚನಾಮೆಯೊಂದಿಗೆ ಲಗತ್ತಿಸಿರುತ್ತೇವೆ. ಚಾಸಾ-8 ರಿಂದ 11 ರವರ ಹೇಳಿಕೆಗಳನ್ನು ಗುನ್ನೆ ಸ್ಥಳದಲ್ಲಿ ಪಡೆದಿರುತ್ತೇವೆ. ಚಾಸಾ-1 ರವರ ಪುರವಣಿ ಹೇಳಿಕೆಯನ್ನು ಕಡಗಂಚಿಯಲ್ಲಿ ಪಡೆದಿರುತ್ತೇನೆ. ಚಾಸಾ-8 ರಿಂದ 11 ರವರ ಹೇಳಿಕೆ ಹಾಗೂ ಚಾಸಾ-1 ರವರ ಪುರವಣಿ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿರುವುದಿಲ್ಲ ಠಾಣೆಯಲ್ಲಿಯೇ ಕುಳಿತು ದಾಖಲೆಗಳನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ.

ನನಗೆ ರಸ್ತೆ ಅಪಘಾತದ ಬಗ್ಗೆ ಕರೆ ಮುಖಾಂತರ ತಿಳಿದು ಬಂದಿದ್ದು, ಕಡಗಂಚಿಯ ಎನಡಿಪಿ ಪೆಟ್ರೊಲ ಬಂಕ ಬಳಿ ಕೋಡಿಯಾಳ ಬ್ರಿಡ್ಜ ಹತ್ತಿರ ಅಪಘಾತ ಅಗಿದೆ ಎಂದು ಗೊತ್ತಾಗಿದ್ದು, ನಾವು ಸ್ಥಳಕ್ಕೆ ಭೇಟಿ ನೀಡಿ ನೋಡಲಾಗಿ ಎರಡೂ ವಾಹನಗಳು ಅಲ್ಲಿಯೇ ಬಿದ್ದಿದ್ದವು ಹಾಗೂ ಶ್ರೀಶೈಲ ಎಂಬುವವನು ಸ್ಥಳದಲ್ಲಿಯೇ ಮೃತಪಟ್ಟಿದ್ದನು, ಶಿವಾನಂದರವರಿಗೆ ಗಾಯಗಳು ಆಗಿದ್ದವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಅಂಬುಲೆನ್ಸನ್ನುಕರೆಯಿಸಿ ಅಂಬುಲೆನ್ಸನಲ್ಲಿ ಕಲಬುರಗಿಗೆ ಕಳುಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಶ್ರೀಶೈಲರವರ ಮೃತದೇಹವನ್ನು ಶವಪರಿಕ್ಷೆಗಾಗಿ ಶವಾಗಾರಕ್ಕೆ ಕಳುಹಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಚಾಸಾ-8, 10, 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಚಾಸಾ-1 ರವರ ಪುರವಣಿ ಹೇಳಿಕೆ ಪಡದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. 11.30 ರಿಂದ 3.00 ಗಂಟೆಯವರೆಗೆ ಶವ ಪಂಚನಾಮೆಯನ್ನು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಗುನ್ನೆ ಸ್ಥಳ ಪಂಚನಾಮೆಯನ್ನು 4.30 ರಿಂದ 5.30 ರ ವರೆಗೆ ಚಾಸಾ-6, 7 ರವರ ಸಮಕ್ಷಮ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.